# ಬಣ್ಣದಲ್ಲಿಯೇ ಸವೆಯುತ್ತೇನೆ

ಚಲುವರಾಜು

ಝೀ ಕನ್ನಡದ 'ನಾಗಿಣಿ'ಯ ಭೈರವ



★ *ಭೈರವನಾಗಿ ಭಯಾನಕ ದೃಶ್ಯಗಳಲ್ಲಿ ನಟಿಸುವ ನಿಮಗೆ ಒಬ್ಬರೇ ಇದ್ದಾಗ ಭಯ ಆಗುವುದಿಲ್ಲವೇ?*

ಭಯವಾಗುವುದಿಲ್ಲ, ಖುಷಿ ಆಗುತ್ತದೆ. ಭಯಾನಕತೆ ಇರುವುದು ಸವಾಲನ್ನು ಎದುರಿಸುವುದರಲ್ಲಿಯೇ ಹೊರತು ಮಾಟ, ಮಂತ್ರದಲ್ಲಿ ಅಲ್ಲ. ಮೂವತ್ತು ವರ್ಷದ ನಾನು ವಯೋವೃದ್ಧನ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ. ಅದು ನನ್ನ ಪ್ರತಿಪಾತ್ರಗಳಿಗೂ ಸವಾಲೊಡ್ಡುವಂತೆ ನಟಿಸಬೇಕು ಎನ್ನುವ ಬಯಕೆಯ ಭಯವಿವೆ. ಅದನ್ನು ಹೊರತು ಪಡಿಸಿದರೆ ವಾಮಾಚಾರ, ಮಾಟ ಮಂತ್ರದ ಬಗ್ಗೆ ನನಗೆ ನಂಬಿಕೆಯೇ ಇಲ್ಲ. ಅದು ನಿಜ ಎಂದು ನಾನು ನಂಬುವುದೂ ಇಲ್ಲ. ನಾನು ನಂಬುವುದು ದೇವರನ್ನು ಮಾತ್ರ. ಅದನ್ನು ಹೊರತುಪಡಿಸಿದರೆ ನನ್ನ ಕೆಲಸದ ಮೇಲೆ ನನಗೆ ನಂಬಿಕೆಯಿದೆ. ಉಳಿದದ್ದು ವಾಸ್ತವ ಅಂತ ನನಗೆ ಅನ್ನಿಸುವುದಿಲ್ಲ.

★ *ನಿಮಗೆ ಅಭಿನಯದಲ್ಲಿ ಭರವಸೆ ಮೂಡಿದ್ದು ಹೇಗೆ?*

ಬಾಲ್ಯದಿಂದಲೂ ನಾನು ಕ್ರೀಡಾಳು. ಕಾಲೇಜು ದಿನಗಳಲ್ಲಿ ವಾಲಿಬಾಲ್ ಆಡುತ್ತಿದ್ದೆ. ಅದೇ ಹೊತ್ತಿಗೆ ಸಣ್ಣ ದುರಂತ ಘಟನೆಯೊಂದು ನಡೆದು ನನ್ನ ಕಾಲಿಗೆ ಪೆಟ್ಟಾಯಿತು. ಅದರ ಆರೈಕೆಯಲ್ಲಿ ಪದವಿಯ ಓದನ್ನು ಅರ್ಧಕ್ಕೆ ಬಿಟ್ಟೆ ಆ ಮೂಲಕ ನನ್ನಲ್ಲಿ ಇದ್ದ ಆಶೆಗಳು ಕಮರಿ ಹೋದವು. ಒಬ್ಬ ಒಳ್ಳೆಯ ಆಟಗಾರನಾಗಿ ಗುರುತಿಸಿಕೊಳ್ಳಬೇಕು. ಕ್ರೀಡೆಯ ಕೋಟಾದಲ್ಲಿಯೇ ಸರ್ಕಾರಿ ನೌಕರಿಗೆ ಸೇರಬೇಕು. ಇಲ್ಲವೇ ಪೊಲೀಸ್ ಅಧಿಕಾರಿ ಆಗಬೇಕು ಎಂದುಕೊಂಡಿದ್ದೆ. ನನ್ನ ಅಪ್ಪ ಹಾಸನ ಜಿಲ್ಲೆಯ ಹೊಳೆನರಸೀಪುರದಲ್ಲಿ ಬಡಗಿಯಾಗಿದ್ದರು. ಆರ್ಥಿಕ ಪರಿಸ್ಥಿತಿ ಅಷ್ಟು ಚೆನ್ನಾಗಿ ಇರಲಿಲ್ಲ. ಬದುಕು ಕಷ್ಟ ಎಂದು ಅಪ್ಪನ ಜೊತೆ ಕೆಲಸ ಮಾಡಲು ಆರಂಭಿಸಿದೆ. ಆಗ ಚಿಂತೆ ಆರಂಭ ಆಯಿತು. ಇದೇ ಕೆಲಸದಲ್ಲಿ ತೊಡಗಿದರೆ ನನ್ನ ಕಥೆ ಮುಗಿಯಿತು. ಏನಾದರೂ ಮಾಡಲೇಬೇಕು ಎಂದು ಯೋಚಿಸಿದೆ. ಬಾಲ್ಯದಲ್ಲಿಯೇ ನಾನು ನಾಟಕ, ರೂಪಕ, ಮೈಮ್ ಮಾಡುತ್ತಿದ್ದೆ. ಆ ಬಗ್ಗೆ ಧ್ಯಾನಿಸಲು ಆರಂಭಿಸಿದೆ.

★ *ನಟನೆಗೆ ಪೂರ್ವ ತಯಾರಿ ಯಾವ ರೀತಿ ನಡೆಸಿದ್ರಿ?*

ನಟ ಆಗಬೇಕು ಎನ್ನುವ ಆಸೆ ಬಿಟ್ಟರೆ ಬೇರೆ ಏನೂ ನನಗೆ ಗೊತ್ತಿರಲಿಲ್ಲ. ಗೆಳೆಯನೊಬ್ಬ ಡಿಪ್ಲೊಮಾ ಮಾಡಲು ತಿಳಿಸಿದ. 'ಡಿಪ್ಲೊಮಾ ಇನ್ ಫಿಲ್ಮ್ ಆ್ಯಕ್ಟಿಂಗ್' ಮಾಡುವುದೆಂದು ನಿರ್ಧರಿಸಿದೆ. ಅದಕ್ಕೆ ಬೆಂಗಳೂರಿಗೆ ಹೋಗಬೇಕು. ಶುಲ್ಕ ಪಾವತಿಸಬೇಕು. ವಸತಿ ಸೇರಿದಂತೆ ಯಾವುದಕ್ಕೂ ನನ್ನ ಹತ್ತಿರ ದುಡ್ಡು ಇರಲಿಲ್ಲ. ಆಗ ಗೆಳೆಯರು ನೆರವಿಗೆ ಬಂದರು. ಐನೂರು, ಸಾವಿರ ಎಂದು ಹತ್ತಾರು ಗೆಳೆಯರು ಹಣವನ್ನು ಹೊಂದಿಸಿಕೊಟ್ಟರು. ಓದುವಾಗ ಚಾಮರಾಜ್ ಎನ್ನುವ ಗುರುಗಳು ನನಗೆ ಸಿಕ್ಕರು. ಅವರೇ ನನ್ನನ್ನು ತಮ್ಮ ಮನೆಯಲ್ಲಿ ಇಟ್ಟುಕೊಂಡು ಎರಡು ವರ್ಷ ಸಾಕಿದರು. ನಟನೆಯ ಪಟ್ಟುಗಳನ್ನು ಹೇಳಿಕೊಟ್ಟಿದ್ದಲ್ಲದೆ. ನನ್ನನ್ನು ಎಸ್.ಗೋವಿಂದ್ ಅವರಿಗೆ ಪರಿಚಯಿಸಿದರು. ಕೆಲಸದ ಅಗತ್ಯ ಅರಿತ ಅವರು ಉದಯದಲ್ಲಿ ಪ್ರಸಾರವಾಗುತ್ತಿದ್ದ 'ಸಂಬಂಧ' ಧಾರಾವಾಹಿಯಲ್ಲಿ ಪರಶುರಾಮ ಪಾತ್ರವನ್ನು ಸೃಷ್ಟಿ ಮಾಡಿದರು. ಒಂದು ತಿಂಗಳ ಪಾತ್ರ ಎಂದು ಹೇಳಿದ್ದರು. ಆದರೆ ಅದು ಒಂದೂವರೆ ವರ್ಷ ನಡೆಯಿತು.

★ *ಪೌರಾಣಿಕ ಮತ್ತು ಭಯಾನಕ ಪಾತ್ರಗಳ ಪಯಣ ಆರಂಭ ಆಗಿದ್ದು ಹೇಗೆ?*

ನಟನೆಯನ್ನು 2009ರಿಂದ ಆರಂಭಿಸಿದ್ದೇನೆ. ಇದುವರೆಗೂ ಬಿಡುವು ಇಲ್ಲದಷ್ಟು ಕೆಲಸ ಮಾಡುತ್ತಿದ್ದೇನೆ. ಉದಯದ 'ಮಹಾಭಾರತ'ಕ್ಕೆ ಆಡಿಷನ್ ನಡಿತಾ ಇತ್ತು. ಸುಂದರಶ್ರೀಯಮ್ಮ ಆಡಿಷನ್ ಮಾಡುತ್ತಿದ್ದರು. ಪೌರಾಣಿಕ ಪಾತ್ರಕ್ಕೆ ನಾನು ದೈಹಿಕವಾಗಿ ಫಿಟ್ ಅನ್ನಿಸಿದರೂ ಭಾಷೆಯನ್ನು ರೂಢಿಸಿಕೊಳ್ಳುವುದು ಕಷ್ಟ ಅನ್ನಿಸಿತು. ಅಲ್ಲಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದೆ. ಆದರೆ, ಆಡಿಷನ್ ಕೊಡಲೇಬೇಕಾಯಿತು. ಅದಾಗಿ ಒಂದು ತಿಂಗಳ ನಂತರ ಕಾಸ್ಟ್ಯೂಮ್ ಹಾಕಿ ಸ್ಕ್ರೀನ್ ಪ್ಲೇ ಮಾಡಲು ಕರೆ ಬಂತು. ಅವತ್ತು ಅಲ್ಲೇ ಊಟ ಕೊಡಿಸಿದರು. ತಿನ್ನುವಾಗ ಹೇಗೂ ಪಾತ್ರ ಸಿಗುತ್ತದೆ. ಐದು ವರ್ಷ ಅನ್ನ ಸಂಪಾದನೆ ಆಗುತ್ತದೆ ಎಂದು ಭಾವಿಸಿದೆ. ಅಧೈರ್ಯದಲ್ಲಿಯೇ ಪಾತ್ರಕ್ಕೆ ಸಿದ್ಧನಾಗುತ್ತಿದ್ದೆ. ಶಕುನಿ ಪಾತ್ರ ನಿರ್ವಹಿಸಿದ್ದ ರಮೇಶ್ ಪಂಡಿತ್ ದೊಡ್ಡ ಕಲಾವಿದ. ಅವರು ನನ್ನನ್ನು ಪೌರಾಣಿಕ ನಟನನ್ನಾಗಿ ರೂಪಿಸಿದರು.

ತಮಿಳಿನಲ್ಲಿಯೂ ಇದೇ ಧಾರಾವಾಹಿಯನ್ನು ಮಾಡಲಾಯಿತು. ದುರ್ಯೋಧನನ ಬದಲಿಗೆ ಕರ್ಣನ ಪಾತ್ರ ನೀಡಬಹುದು ಎಂಬುದು ತಂಡದಲ್ಲಿಯ ಹಲವರ ಅಭಿಪ್ರಾಯವಾಗಿತ್ತು. ವಾಹಿನಿ ಮಾತ್ರ ತಮಿಳು ಭಾಷೆ ಹಿಡಿತದಲ್ಲಿ ಇರುವವರಿಗೆ ಪ್ರಧಾನ ಪಾತ್ರ ಕೊಡುವುದಾಗಿ ಹೇಳಿತು. ಆದರೆ ನನ್ನನ್ನು ಮಾತ್ರ ಕೈ ಬಿಡಲಿಲ್ಲ. ಅಶ್ವತ್ಥಾಮನಾಗಿ ನಾನು ತಮಿಳು ಧಾರಾವಾಹಿಯಲ್ಲಿ ನಟಿಸಲು ಅವಕಾಶ ಸಿಕ್ಕಿತು. ಇತ್ತೀಚೆಗೆ 'ಸಮರ್ಥ' ಎಂಬ ಸಿನಿಮಾದಲ್ಲಿ ಪೊಲೀಸ್ ಅಧಿಕಾರಿಯಾಗಿ ನಟಿಸಿದ್ದೇನೆ.

★ ನಿಮ್ಮ ಮುಂದಿನ ಗುರಿ ಬಗ್ಗೆ ಹೇಳುವುದಾದರೆ...

ಅಭಿನಯವೇ ನನ್ನ ಕೊನೆಯ ದಾರಿ. ದೊಡ್ಡ ದೊಡ್ಡ ನಟರ ಜೊತೆ ನಟಿಸಬೇಕು ಎನ್ನುವ ಬಯಕೆ ಇದೆ. ಖಳನಟನಾಗಿ ಜನಮನ್ನಣೆ ಗಳಿಸಬೇಕು. ಬಣ್ಣದಲ್ಲಿಯೇ ಬದುಕು ಸವೆಸುತ್ತೇನೆ ಎನ್ನುವ ವಿಶ್ವಾಸ ಇದೆ.